ಅನುಭವ ಕಥನ

# ವಸ್ತು ಪ್ರಕಾರ...



'ಮನೆ ಕಟ್ಟಿ ನೋಡು' ಎಂಬ ಗಾದೆ ಹಳೆಯದಾದರೂ ಅದರ ಹಿಂದಿನ ಉದ್ದೇಶ ಇಂದಿಗೂ ಅನ್ವಯಿಸುವಂಥದ್ದು. ಕಾಲಕಾಲಕ್ಕೆ ಮನೆ ಕಟ್ಟುವ ಸವಾಲುಗಳು ಅಪ್‌ಡೇಟ್ ಆಗುತ್ತಲೇ ಇವೆ. ಅವುಗಳ ಸಾಲಿಗೆ ವಾಸ್ತುಪ್ರಕಾರ, ವಸ್ತುಪ್ರಕಾರ ಮನೆ ಕಟ್ಟುವುದೂ ಸೇರಿಕೊಂಡಿದೆ...

■ ಗಣೇಶ ಹೆಗ್ಗಡೆ

'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಈ ಗಾದೆ ಬಗ್ಗೆ ಅದೇಕೋ ಈಚೆಗೆ ಜಿಜ್ಞಾಸೆ ಮೂಡಿತು. ಗಾದೆಯ ಪ್ರಥಮ ವಾಕ್ಯ ಈಗ ಅರ್ಥ ಕಳೆದುಕೊಂಡಿದೆಯೇ? ಎಂಬ ಸಂಶಯ ನನ್ನದು. ಈಗಿನ ಕಾಲಕ್ಕೆ ತಕ್ಕಂತೆ, 'ಮದುವೆ ಮಾಡಿಕೊಂಡು ನೋಡು' ಎಂದಾಗಿದ್ದಿದ್ದರೆ ಸರಿಹೋಗುತ್ತಿತ್ತೇನೊ? ಇನ್ನು ಎರಡನೇ ವಾಕ್ಯದ ತಂಟೆಗೆ ನಾನು ಹೋಗಲೇಬಾರದಿತ್ತು. ಸತ್ಯಾನ್ವೇಷಣೆಗಂತೂ ಪ್ರಯತ್ನಿಸಲೇಬಾರದಿತ್ತು. ಇದರಿಂದ ನಾನು ಅನುಭವಿಸಿದ ಅಡ್ಡಿ, ಆತಂಕ ಒಂದೇ, ಎರಡೇ?

ಇದಕ್ಕೊಂದು ಪೀಠಿಕೆ ಅತ್ಯಗತ್ಯ. ಯಾರಿಗಾದರೂ ಮನೆ ಕಟ್ಟುವ ಇರಾದೆಯಿದ್ದರೆ, ಕನಿಷ್ಠ ಪಕ್ಷ ಅವರ ಬಳಿ ಒಂದು ಸೈಟು ಇರಬೇಕು. ಈ ತುಟ್ಟಿಕಾಲದಲ್ಲಿ, ಅದೂ ಮಧ್ಯಮ ವರ್ಗದವರಲ್ಲಿ ಸೈಟಾದರೂ ಸುಮ್ಮನೆ ಹೇಗೆ ಬಂದೀತು? ಎಂಬ ಗುಮಾನಿ ಸಹಜ. ನನ್ನಲ್ಲಿದ್ದ ಸೈಟಿನ ಹಿಂದೆ ಸ್ವಾರಸ್ಯಕರ ಸಂಗತಿಯಿದೆ.

ನಮ್ಮ ವಿವಾಹಪೂರ್ವದಲ್ಲಿ ನನ್ನ ಮಿಲ್ಟ್ರಿ ಮಾವ ಈ ಮದುವೆ ಪ್ರಸ್ತಾಪಕ್ಕೆ ತೀವ್ರ ಕೆರಳಿ, ಕಾಡತೂಸು ಇಲ್ಲದ ಬಂದೂಕನ್ನು ಮಗಳ ಮುಂದೆ ಹಿಡಿದು, 'ಇಂದೇ ತೀರ್ಮಾನವಾಗಲಿ, ನಿನಗೆ ಆ ನರಪೇತಲ ವರ ಬೇಕೊ? ಇಲ್ಲ ಬೆಲೆ ಬಾಳುವ ಸೈಟು ಬೇಕೊ?' ಎಂದು ಕೋರ್ಟ್ ಮಾರ್ಷಲ್ ಮಾಡಿದ್ದನಂತೆ. ವಿಚಲಿತಳಾಗದ ನನ್ನ ಜಾಣ ಪೋರಿ ನನ್ನನ್ನೇ ಆಯ್ಕೆ ಮಾಡಿಕೊಂಡಳಂತೆ. ಇದು ಒಂದು ತರಹದ ಗನ್ (Gun)ಧರ್ವ ವಿವಾಹವೆಂದು ನೆಂಟರಿಷ್ಟರು ನಗಾಡಿಕೊಂಡಿದ್ದರಂತೆ. ಕಾಲಕ್ರಮೇಣ ಮಾವನಿಗೆ ತನ್ನ ತಪ್ಪು ಅರಿವಾಗುವ ವೇಳೆಗೆ ಎರಡೂ ಕಣ್ಣುಗಳಿಗೆ ಪೊರೆ ರಾಚಿಕೊಂಡಿತ್ತು. ಕಣ್ಣಿನ ಹೊರ ಪೊರೆಯನ್ನು ನೇತ್ರ ವೈದ್ಯರು ತೆಗೆದು, ಮನಸ್ಸಿನ ಒಳ ಪೊರೆಯನ್ನು ಸ್ವತಃ ತಾನೆ ತೆರೆದುಕೊಂಡು ಒಂದು ಪ್ರಶಸ್ತ ದಿನ ಸೈಟನ್ನು ಬಳುವಳಿಯಾಗಿ ಮಗಳಿಗೆ ಕೊಟ್ಟನಂತೆ. ಈ ವಿಚಾರಗಳೆಲ್ಲ ಗುಪ್ತವಾಗಿ ನನ್ನ ಕಿವಿಗೆ ರವಾನೆಯಾಗಿತ್ತು.

ಹೀಗೆ ಬಳುವಳಿಯಾಗಿ ಬಂದ ಸೈಟು ಖಾಲಿ ಬಿದ್ದಿದ್ದು, ನಾವಿದ್ದ ಬಾಡಿಗೆ ಮನೆಯಿಂದ ಸುಮಾರು 10 ಕಿ.ಮೀ. ದೂರದಲ್ಲಿತ್ತು. ಪ್ರತಿ ರವಿವಾರ ತಪ್ಪದೆ ನಾನು, ಮಡದಿ ಸ್ಕೂಟರಿನಲ್ಲಿ ಪಯಣಿಸಿ, ಆ ಸೈಟಿನ ಮುಂದೆ ನಿಂತು ಒಂದರ್ಧ ತಾಸು ಕಳೆಯುವುದೇ ವೀಕೆಂಡು ಮನರಂಜನೆಯಾಗಿತ್ತು. ಅಂಥ ಒಂದು ಶುಭವೇಳೆ, ಅಲ್ಲೇ ದಾರಿಹೋಕರೊಬ್ಬರು ನಮ್ಮನ್ನು ಅನುಮಾನಿಸಿ ನೋಡಿ, 'ಓಹೋ ತಮ್ಮದೋ ಈ ಸೈಟು?' ಎಂದು ವ್ಯಂಗ್ಯವಾಗಿ ಕೇಳಿದ್ದರು.

ಹೆಮ್ಮೆಯಿಂದ ಉತ್ತರಿಸುವುದರೊಳಗೆ ಅವರು, 'ನೋಡಿ ಹೀಗೆ ಹೇಳ್ತಿದಿನೀಂತ ತಪ್ಪು ತಿಳ್ಕೊಬ್ಯಾಡಿ. ಇಷ್ಟು ದಿನ ಈ ಸೈಟು ಹೀಗೆ ಖಾಲಿ ಉಳಿದಿರುವುದೇ ಹೆಚ್ಚು. ಇದು ಕೆಟ್ಟ ಕಾಲ, ನಿಮಗರಿವಿಲ್ಲದಂತೆ ಈಗಾಗಲೇ ಯಾರೋ ದಾಖಲೆ ಬದಲಿಸಿ ಅದಿನ್ಯಾರಿಗೋ ಮಾರಿ ಕಾಸು ಮಾಡಿಕೊಂಡು ಪರಾರಿಯಾಗಿರಬಹುದು. ಯಾವುದಕ್ಕೂ ಕಾರ್ಪೊರೇಷನ್ ಕಚೇರಿಗೆ ಹೋಗಿ ದಾಖಲೆ ಪರೀಕ್ಷಿಸಿಕೊಳ್ಳಿ' ಎಂದೆಚ್ಚರಿಸಿದಾಗ ನಮಗೆ ಕಾಲುಬುಡದ ನೆಲವೇ ಬಾಯ್ತೆರೆದಂತಾಯ್ತು. ತಡ ಮಾಡುವುದರಲ್ಲಿ ಅರ್ಥವಿಲ್ಲ, ಈ ವರ್ಷವೇ ಇಲ್ಲಿ ಮನೆ ಕಟ್ಟಿಯೇ ತೀರುತ್ತೇವೆ ಎಂದು ಪ್ರತಿಜ್ಞೆ ಮಾಡಿ, ಅಲ್ಲಿಂದ ನಿರ್ಗಮಿಸಿದ್ದೆವು.

ಮುಂದೆ ನಮಗೆದುರಾಗಿದ್ದೇ 'ಮನೆ ಕಟ್ಟಿ ನೋಡು' ಎಂಬ ಗಾದೆಯ ಸಂಪೂರ್ಣ ಅನುಭವಗಳು.